## ಉಡುಗೊರೆ ಕೊಡದವರಿಗೆ



ಅದು ರಾಜಕಾರಣಿಯ ಮಗಳ ಮದುವೆಯ ಸಮಾರಂಭ. ಎಕರೆಗಟ್ಟಲೆ ವಿಸ್ತೀರ್ಣದಲ್ಲಿ ಪೆಂಡಾಲ್ ಹಾಕಲಾಗಿತ್ತು. ರಾಜಕಾರಣಿಯ ಬಂಟ ತಿಪ್ಪೇಶಿ ಖುಷಿಯಿಂದ ಮದುವೆಗೆ ಹೋದ. ಪೆಂಡಾಲ್‌ನ ಪ್ರವೇಶ ದ್ವಾರದಲ್ಲಿ, 'ಉಡುಗೊರೆ ಕೊಡುವವರಿಗೆ' ಎಂದು ಬೋರ್ಡ್ ಹಾಕಲಾಗಿತ್ತು. ಪಕ್ಕದಲ್ಲಿ 'ಉಡುಗೊರೆ ಕೊಡದವರಿಗೆ' ಎಂದು ಬರೆದಿತ್ತು. ತಿಪ್ಪೇಶಿ ರಾಜಕಾರಣಿಯ ಆಪ್ತನಾದುದರಿಂದ ಉಡುಗೊರೆ ತಂದಿರಲಿಲ್ಲ. 'ಉಡುಗೊರೆ ಕೊಡದವರಿಗೆ' ಎಂದು ಹಾಕಿದ್ದ ಬೋರ್ಡ್‌ನಲ್ಲಿ ತೋರಿಸಿದ ಬಾಣದ ಗುರುತು ನೋಡಿಕೊಂಡು ಮುಂದೆ ಸಾಗಿದ. ಮದುವೆ ವೇದಿಕೆ ಬರಲೇ ಇಲ್ಲ! ಕೊನೆಗೆ ಅವನು ಹಿಂದಿನ ದ್ವಾರದಿಂದ ಟೆಂಟಿನ ಹೊರಗೆ ಬಂದು ನಿಂತಿದ್ದ!

**ಕೆ.ಜಿ. ಭದ್ರಣ್ಣವರ**

---



## ಬೇಡಿಕೆ!

ಗುಂಡ ದಂಪತಿ ತಮ್ಮ ಕಾರಿನಲ್ಲಿ ಪ್ರಯಾಣ ಹೊರಟಿದ್ದರು. ಗುಂಡ ಡ್ರೈವಿಂಗ್ ಮಾಡುತ್ತಿದ್ದ ಮತ್ತು ಪತ್ನಿ ಸೀಟ್ ಬೆಲ್ಟ್ ಧರಿಸಿ ಪಕ್ಕದ ಸೀಟಲ್ಲಿ ಕೂತಿದ್ದಳು. ಗುಂಡ ಹೇಳಿದ, 'ಸಂಚಾರಿ ನಿಯಮಗಳು ಈಗ ತುಂಬಾ ಕಠಿಣವಾಗಿವೆ. ಸಣ್ಣ ತಪ್ಪಿಗೂ ದೊಡ್ಡ ದಂಡ ತೆರಬೇಕು'. ಇದೇ ಸರಿಯಾದ ಸಮಯ ಎಂದುಕೊಂಡು ಗುಂಡನ ಪತ್ನಿ ಉಸುರಿದಳು,'ಅದೆ ಮತ್ತೆ, ಈಗ ನನಗೊಂದು ಒಳ್ಳೇ ರೇಷ್ಮೆ ಸೀರೆ ಕೊಡಿಸಿ, ಇಲ್ಲಾಂದ್ರೆ ನಾನು ಸೀಟ್ ಬೆಲ್ಟ್ ತೆಗೆದು ಬಿಡುತ್ತೇನೆ!'

**ರಮಣ್ ಶೆಟ್ಟಿ ರೆಂಜಾಳ್**

ಕಲೆ: ಗಣೇಶ ಆಚಾರ್ಯ